

## ಪರಿಣೀತಿ ಮಾತು, ವರುಣ್ ಪೇಚು!

ನಟ ವರುಣ್ ಧವನ್ ಕದ್ದುಮುಚ್ಚಿ ಗರ್ಲ್‌ಫ್ರೆಂಡ್ ಜೊತೆ ಸುತ್ತಾಡುತ್ತಿದ್ದರೂ ಅದನ್ನು ಬಹಿರಂಗವಾಗಿ ಒಪ್ಪಿಕೊಂಡಿಲ್ಲ. ತಾನು ಒಬ್ಬಂಟಿ ಎಂದು ಹೇಳಿಕೊಳ್ಳುವ ವರುಣ್, ತನ್ನ ಪ್ರೇಮಕಥನ ಎಲ್ಲಿ ಸಿನಿಬದುಕಿಗೆ ಅಡ್ಡಿಯಾಗುತ್ತದೆಯೋ ಎಂಬ ಭಯದಲ್ಲಿದ್ದಾರೆ. ಆದರೆ ಸಂದರ್ಶನವೊಂದರಲ್ಲಿ ನಟಿ ಪರಿಣೀತಿ ಚೋಪ್ರಾ, ವರುಣ್‌ಗೆ ಗೆಳತಿ ಇದ್ದಾಳೆ ಎಂಬ ಸತ್ಯವನ್ನು ಬಾಯಿತಪ್ಪಿ ಹೇಳಿ ಅವರನ್ನು ಪೇಚಿಗೆ ಸಿಲುಕಿಸಿದ್ದಾರೆ.

ಸಂದರ್ಶನದ ಮಧ್ಯೆ ತಾನು ಬಾಯಿ ತಪ್ಪಿ ಸತ್ಯ ಹೇಳಿದ್ದನ್ನು ಕೂಡಲೇ ತಿದ್ದಿಕೊಂಡ ಪರಿಣೀತಿ, ದಯವಿಟ್ಟು ಈ ಮಾತುಗಳನ್ನು ಎಡಿಟ್ ಮಾಡಿ ಎಂದು ಸಂದರ್ಶಕನನ್ನು ಕೋರಿದರಂತೆ. ವರುಣ್ ಧವನ್ ಜೊತೆ ಈ ಕಾರಣಕ್ಕಾಗಿ ಮನಸ್ತಾಪ ಆಗಬಾರದು ಎನ್ನುವುದು ಪರಿಣೀತಿಯ ಇಚ್ಛೆಯಂತೆ.

ಎಡಿಟ್ ಆದ ಸಂದರ್ಶನವೇನೋ ಪ್ರಸಾರವಾಯಿತು. ಆದರೆ ಸುದ್ದಿಮನೆಯಿಂದ ಸುದ್ದಿ ಸೋರಿದ್ದು, ವರುಣ್ ನತಾಶಾ ದಲಾಲ್ ಎಂಬ ನಟೀಮಣಿಯ ಜತೆಗೆ ಕ್ಲೋಸ್ ಆಗಿದ್ದಾರೆ ಎಂಬುದು ಎಲ್ಲರಿಗೂ ಗೊತ್ತಾಯಿತು! 'ಆಗಲಿ ಬಿಡಿ. ನನ್ನ ಸಂಬಂಧದ ಕುರಿತು ಹರಡುತ್ತಿದ್ದ ಗಾಸಿಪ್ ಮತ್ತು ರೂಮರ್‌ಗಳು ಈ ಮುಂಚೆ ಪರಿಣಾಮ ಬೀರುತ್ತಿದ್ದವು. ಆದರೆ ಇನ್ನು ಮುಂದೆ ಅದೇನೂ ಪರಿಣಾಮ ಬೀರುವುದಿಲ್ಲ' ಎಂದಿದ್ದಾರೆ ವರುಣ್.



## ಅರ್ಜುನ್ ಕಪೂರ್- ನರ್ಗಿಸ್ ಸಲ್ಲಾಪ?

ಉದಯ್ ಚೋಪ್ರಾ ಮತ್ತು ನರ್ಗಿಸ್ ಫಖ್ರಿ ಪ್ರೇಮ ಪುರಾಣದ ದಿಕ್ಕು ಬದಲಾದಂತಿದೆ. ಇಬ್ಬರೂ ಮದುವೆ ಆಗಿಯೇ ಬಿಟ್ಟರು ಎಂಬ ಸುದ್ದಿ ದಟ್ಟವಾಗಿತ್ತು. ಆದರೆ ಆ ಲೆಕ್ಕಾಚಾರ ಈಗ ತಲೆಕೆಳಗಾಗಿದೆ. ಹಾಲಿವುಡ್ ಪ್ರಾಜೆಕ್ಟ್‌ಗಾಗಿ ಹಿಂದಿ ಚಿತ್ರದಿಂದ ಹೊರಬಂದಿದ್ದು, ಈಗ ಉದಯ್ ತೆಕ್ಕೆಯಿಂದ ಜಾರಿಕೊಂಡಿದ್ದು- ಹೀಗೆ ಸದ್ಯಕ್ಕೆ ನರ್ಗಿಸ್ ಸುದ್ದಿಯಲ್ಲಿದ್ದಾರೆ. ಈಗ ಉದಯ್ ಜತೆಗೆ ಕಿತ್ತಾಟವಾಗಿದ್ದು ದೋಸ್ತಿ ಮುರಿದುಬಿದ್ದಿದೆಯಂತೆ.

ಈ ಮಧ್ಯೆ ನಟ ಅರ್ಜುನ್ ಕಪೂರ್ ಮತ್ತು ನರ್ಗಿಸ್ ಪರಸ್ಪರ ಹತ್ತಿರವಾಗಿದ್ದಾರೆ ಎಂಬ ಸುದ್ದಿ ಹಬ್ಬಿದೆ. ಏಕ್ತಾ ಕಪೂರ್ ಏರ್ಪಡಿಸಿದ್ದ ಪಾರ್ಟಿಯಲ್ಲಿ ನರ್ಗಿಸ್ ಮತ್ತು ಅರ್ಜುನ್ ಅತಿ ಸಲುಗೆಯಿಂದ ವರ್ತಿಸಿದರಂತೆ. ಅದು 'ಮೈ ತೇರಾ ಹೀರೊ' ಮತ್ತು 'ರಾಗಿಣಿ ಎಂಎಂಎಸ್' ಚಿತ್ರಗಳ ಗೆಲುವಿನ ಸಂಭ್ರಮಾಚರಣೆಯ ಕೂಟ. ಅದರಲ್ಲಿ ವರುಣ್ ಧವನ್, ಇಲಿಯಾನಾ, ಅರುಣೋದಯ್ ಸಿಂಗ್ ಸಹ ಪಾಲ್ಗೊಂಡಿದ್ದರು. ಆ ರಾತ್ರಿಯಿಡೀ ನರ್ಗಿಸ್ ಮತ್ತು ಅರ್ಜುನ್ ಹರಟಿದ್ದಾರೆ. ಅದರ ಮೂಲಕ ಉದಯ್ ಚೋಪ್ರಾ ಇಲ್ಲದಿದ್ದರೂ ದಿನವನ್ನು ಖುಷಿಯಾಗಿ ಕಳೆಯಬಲ್ಲೆ ಎಂಬ ಸಂದೇಶವನ್ನು ನರ್ಗಿಸ್ ರವಾನಿಸಿದ್ದಾರಂತೆ.

ಸುದ್ದಿಯ ಕುರಿತು ನರ್ಗಿಸ್ ವಕ್ತಾರೆ ಸ್ಪಷ್ಟೀಕರಣವನ್ನೂ ನೀಡಿದ್ದು, 'ಇಬ್ಬರ ನಡುವೆ ಅಂಥದ್ದೇನಿಲ್ಲ. ಅರ್ಜುನ್, ಅಲಿಯಾ ಭಟ್, ಹುಮಾ ಖುರೇಷಿ ಮುಂತಾದವರನ್ನು ಅವತ್ತು ನರ್ಗಿಸ್ ಮೊದಲ ಬಾರಿಗೆ ಭೇಟಿ ಮಾಡಿದ್ದರಿಂದ ಅವರೊಂದಿಗೆ ಹೆಚ್ಚು ಸಮಯ ಕಳೆದಿದ್ದಾರಷ್ಟೇ' ಎಂದಿದ್ದಾಳೆ. ಆದರೆ ಬಾಲಿವುಡ್‌ನಲ್ಲಿ ಯಾರೂ ನಂಬಲು ಸಿದ್ಧರಿಲ್ಲ.

■ ಅಮಿ